2. 1992ನೇ ಕರ್ನಾಟಕ ಧನ ವಿನಿಯೋಗ ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಎಸ್ ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ 1991 ನೇ ಸಾಲಿನ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ 1991 ನೇ ಸಾಲಿನ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತ್ತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ 1991 ನೇ ಸಾಲಿನ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. Annexure 1 & 2

ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ 1991

ಮಂಡನೆಗೆ ಅನುಮತಿ ಕೋರಿಕೆ (ಹಿಂದಕ್ಕೆ ತೆಗೆದುಕೊಳ್ಳಲಾಯಿತು.)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ 1991 ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ 1991ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಇಂಟ್ರಡಕ್ಷನ್ ಸ್ಟೇಜಿನಲ್ಲೇ ಏತಕ್ಕೆ ಹೇಳುತ್ತಿದ್ದೇನೆಂದರೆ ಈ ಮಸೂದೆಯಲ್ಲಿ ಬಹಳಷ್ಟು ಬದಲಾವಣೆ ಇದೆ. ಮುದ್ರಣ ದೋಷವೂ ಅಥವಾ ಏನೋ ಗೊತ್ತಿಲ್ಲ. ಅಲ್ಲಿ ಏನು ಹೇಳಿದ್ದಾರೆಂದರೆ,

"94ಎ ಸಮಿತಿಗಳನ್ನು ರಚಿಸುವ ಮೂಲಕ ಕೆಲವು ಅನಧಿಕೃತ ಅಧಿಭೋಗದ ಪ್ರಕರಣಗಳನ್ನು ಸಕ್ರಮಗೊಳಿಸುವುದು ಮೊದಲಾದವು. (1) ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು ರಾಜ್ಯ ಸರ್ಕಾರವು ಅಧಿ ಸೂಚನೆಯ ಮೂಲಕ (4) ನೇ ಉಪ ಪ್ರಕರಣದ ಅಡಿಯಲ್ಲಿ ಭೂಮಿಯ ಮಂಜೂರಾತಿಗಾಗಿ ಪ್ರತಿಯೊಂದು ತಾಲ್ಲೂಕಿಗೆ ಒಬ್ಬರು ವಿಧಾನ ಸಭೆಯ ಅಧ್ಯಕ್ಷರಾಗಿರುವ ಮೂವರನ್ನು ಮೀರದ, ಅಂಥ ಸಂಖ್ಯೆಯನ್ನು ಒಳಗೊಂಡಿರುವ ಸಮಿತಿಯನ್ನು ರಚಿಸತಕ್ಕದ್ದು.

ವಿಧಾನ ಸಭೆಯ ಅಧ್ಯಕ್ಷರು ಎಷ್ಟು ಮಂದಿ ಇದ್ದಾರೆ? ಎಷ್ಟು ತಾಲ್ಲೂಕುಗಳಿಗೆ ಅವರನ್ನು ನೇಮಿಸುತ್ತೀರಿ? ನಮ್ಮಲ್ಲಿ ಇರತಕ್ಕವರು ಒಬ್ಬರೇ ವಿಧಾನಸಭಾಧ್ಯಕ್ಷರು. ಒಂದು ಮಸೂದೆಯನ್ನು ತರುವುದಕ್ಕೆ ಕೂಡ ಸೀರಿಯಸ್‌ನೆಸ್ ಇಲ್ಲವೆಂದರೆ ಹೇಗೆ? ವಿಧಾನಸಭಾಧ್ಯಕ್ಷರು ಇರುವರು ಒಬ್ಬರೇ. 175 ಜನ ವಿಧಾನಸಭಾಧ್ಯಕ್ಷರನ್ನು ಅಂದರೆ ಏಲ್ಲಿಂದ ತರುತ್ತೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ಪ್ರಿಂಟಿಂಗ್ ಮಿಸ್ಟೇಕ್ ಆಗಿದೆ. ವಿಧಾನ ಸಭಾ ಸದಸ್ಯರು ಎಂದು ಇರಬೇಕು. ಅದನ್ನು ಸರಿ ಮಾಡಿಸುತ್ತೇನೆ.

SRI D.B. Chandre Gowda: I don't Know whether it is a printing mistake.....